# ಎನ್.ಎಸ್.ಎಸ್ ನೇತಾರರು
# ಕರ್ನಾಟಕ



**ಶ್ರೀ ಸಿದ್ಧರಾಮಯ್ಯ**
ಮಾನ್ಯ ಮುಖ್ಯ ಮಂತ್ರಿಗಳು,
ಕರ್ನಾಟಕ ಸರ್ಕಾರ



**ಶ್ರೀ ಬಿ. ನಾಗೇಂದ್ರ**
ಮಾನ್ಯ ಸಚಿವರು,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಕರ್ನಾಟಕ ಸರ್ಕಾರ.



**ಶ್ರೀ ಮಂಜುನಾಥ ಪ್ರಸಾದ ಎನ್.** ಭಾ.ಆ.ಸೇ.
ಅಪರ ಮುಖ್ಯ ಕಾರ್ಯದರ್ಶಿಗಳು,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಕರ್ನಾಟಕ ಸರ್ಕಾರ.



**ಡಾ. ಪ್ರತಾಪ್ ಲಿಂಗಯ್ಯ**
ರಾಜ್ಯ ಎನ್.ಎಸ್.ಎಸ್ಅಧಿಕಾರಿಗಳು,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಕರ್ನಾಟಕ ಸರ್ಕಾರ.



**ಶ್ರೀ ಡಿ. ಕಾರ್ಥಿಗೆಯನ್**
ಪ್ರಾಂತೀಯ ನಿರ್ದೇಶಕರು,
ಎನ್.ಎಸ್.ಎಸ್ ಪ್ರಾಂತೀಯ ಕಚೇರಿ,
ಭಾರತ ಸರ್ಕಾರ.

# ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಷ್ಟ್ರೀಯ ಸೇವಾ ಯೋಜನಾ ಕೋಶ

## ಪೀಠಿಕೆ

ಶಿಕ್ಷಣದೊಂದಿಗೆ ಸೇವೆ ಮತ್ತು ಶಿಕ್ಷಣದೊಂದಿಗೆ ವ್ಯಕ್ತಿತ್ವ ವಿಕಸನ ಎಂಬ ಎರಡು ಧ್ಯೇಯಗಳೊಂದಿಗೆ ಗಾಂಧೀಜಿಯವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ 1969ರ ಸೆಪ್ಟೆಂಬರ್ 24ರಂದು ರಾಷ್ಟ್ರೀಯ ಸೇವಾ ಯೋಜನೆಯು ಅನುಷ್ಠಾನಗೊಂಡಿತು. ದೇಶದಲ್ಲಿ 41 ವಿಶ್ವ ವಿದ್ಯಾನಿಲಯಗಳಲ್ಲಿ 47000 ಸ್ವಯಂ ಸೇವಕರೊಂದಿಗೆ ಆರಂಭವಾದ ಈ ಯೋಜನೆಯು ಇಂದು 500ಕ್ಕೂ ಹೆಚ್ಚು ವಿಶ್ವ ವಿದ್ಯಾನಿಲಯಗಳು ಮತ್ತು ನಿರ್ದೇಶನಾಲಯಗಳಲ್ಲಿ ಸುಮಾರು 45 ಲಕ್ಷ ಸ್ವಯಂ ಸೇವಕ/ಸೇವಕಿಯರು ನೋಂದಾಯಿಸಿಕೊಂಡಿದ್ದಾರೆ. ಕರ್ನಾಟಕದಲ್ಲಿ 4000ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳಲ್ಲಿ 6ಲಕ್ಷ ಸ್ವಯಂ ಸೇವಕ/ಸೇವಕಿಯರನ್ನು ನೋಂದಾಯಿಸಿಕೊಳ್ಳಲಾಗಿದೆ.

ರಾಷ್ಟ್ರೀಯ ಸೇವಾ ಯೋಜನೆಯು ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಯಾಗಿದ್ದು ಕೇಂದ್ರ ಸರ್ಕಾರದ ಯುವಜನ ಸೇವೆ ಮತ್ತು ಕ್ರೀಡಾ ಮಂತ್ರಾಲಯವು ಯೋಜನೆಯನ್ನು ಅನುಷ್ಠಾನಗೊಳಸುತ್ತದೆ. ಕರ್ನಾಟಕ ಸರ್ಕಾರದ ರಾಷ್ಟ್ರೀಯ ಸೇವಾ ಯೋಜನಾ ಕೋಶವು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಚಿವರ ಮಾರ್ಗದರ್ಶನದಲ್ಲಿ ಪ್ರಧಾನ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಇವರ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯ ಎನ್.ಎಸ್.ಎಸ್.ಅಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಇವರು ರಾಷ್ಟ್ರೀಯ ಸೇವಾ ಯೋಜನಾ ಕೋಶದ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಒಟ್ಟು 69 ಕಾರ್ಯಕ್ರಮ ಸಂಯೋಜನಾಧಿಕಾರಿಗಳು ಮತ್ತು 4000 ಕಾರ್ಯಕ್ರಮ ಅಧಿಕಾರಿಗಳು ರಾಷ್ಟ್ರೀಯ ಸೇವಾ ಯೋಜನಾ ಚಟುವಟಿಕೆಗಳನ್ನು ಪೂರ್ಣ ಪ್ರಮಾಣದಲ್ಲಿ ನಡೆಸುವಲ್ಲಿ ನಿರತರಾಗಿದ್ದಾರೆ. ಕೇಂದ್ರಸರ್ಕಾರವು 3,21,000 ಸ್ವಯಂ ಸೇವಕರನ್ನು ದೈನಂದಿನ ಕಾರ್ಯಕ್ರಮಗಳಿಗೆ ಹಾಗೂ 1,60,500 ಸ್ವಯಂ ಸೇವಕರನ್ನು ವಿಶೇಷ ಶಿಬಿರಗಳನ್ನು ನಡೆಸಲು ಕೇಂದ್ರ ಸರ್ಕಾರವು ಗುರಿಯನ್ನು ನೀಡಿದೆ. ಈ ಕಾರ್ಯಕ್ರಮಗಳಿಗೆ ಭಾರತ ಸರ್ಕಾರವು ಸಂಪೂರ್ಣವಾಗಿ ಅನುದಾನವನ್ನು ಬಿಡುಗಡೆ ಮಾಡುತ್ತದೆ ಮತ್ತು ಭಾರತ ಸರ್ಕಾರದ 2006ರ ಕೈಪಿಡಿಯ ಪ್ರಕಾರ ರಾಷ್ಟ್ರೀಯ ಸೇವಾ ಯೋಜನಾ ಚಟುವಟಿಕೆಗಳನ್ನು ಅನುಷ್ಠಾನಗೊಳಸಲಾಗಿದೆ. ಸದರಿ ಸಾಲಿನಲ್ಲಿ 2790 ಸ್ವ-ಆರ್ಥಿಕ ಘಟಕಗಳಡಿ 2,79,000 ಸ್ವಯಂ ಸೇವಕರನ್ನು ನೋಂದಾಯಿಸಲಾಗಿದೆ. ಈ ಯೋಜನೆಯಲ್ಲಿ ಕೇಂದ್ರ ಸರ್ಕಾರದ ಅನುದಾನದಲ್ಲಿ ನೋಂದಾಯಿಸುವ ಸ್ವಯಂಸೇವಕರು ಸ್ವ-ಆರ್ಥಿಕ ಘಟಕದಡಿ ನೋಂದಾಯಿಸುವ ಸ್ವಯಂಸೇವಕರನ್ನೊಳಗೊಂಡಂತೆ ಒಟ್ಟು 6,00,000 ಸ್ವಯಂಸೇವಕ/ ಸೇವಕಿಯರು ರಾಜ್ಯ ರಾಷ್ಟ್ರೀಯ ಸೇವಾ ಯೋಜನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ.

ದೇಶದಲ್ಲೇ ಅಪೂರ್ವ ಎನ್ನುವಂತೆ ರಾಜ್ಯ ಸರ್ಕಾರವು ರಾಷ್ಟ್ರೀಯ ಸೇವಾ ಯೋಜನೆಯ ಚಟುವಟಿಕೆಗಳಿಗೆ ವಿಶೇಷ ಅನುದಾನವನ್ನು ನೀಡುತ್ತಿದೆ. ಕೇಂದ್ರ ಸರ್ಕಾರದ ಅನುದಾನವಲ್ಲದೆ ಕರ್ನಾಟಕ ರಾಜ್ಯ ಸರ್ಕಾರವು ರೂ.444.69 ಲಕ್ಷಗಳನ್ನು ವಿಶೇಷ ಅನುದಾನವಾಗಿ ಹಂಚಿಕೆ ಮಾಡಿದೆ. ಸೈಬರ್ ಸೇಫ್ ಅಭಿಯಾನ, ರಾಜ್ಯ ಗಣರಾಜ್ಯೋತ್ಸವ ಪಥಸಂಚಲನ, ರಾಜ್ಯ ಯುವಜನೋತ್ಸವ, 10 ರಾಷ್ಟ್ರೀಯ ಭಾವೈಕ್ಯತಾ ಶಿಬಿರ, ಪರಿಸರ ಕಾರ್ಯಕ್ರಮ, ಡಾ.ಬಿ.ಆರ್.ಅಂಬೇಡ್ಕರ್, ವಿವೇಕಾನಂದ, ಮಹಾತ್ಮ ಗಾಂಧೀಜಿಯವರ ಚಿಂತನೆಗಳ ಪ್ರಸಾರ ಕಾರ್ಯಕ್ರಮಗಳನ್ನು ಆಯೋಜಿಸಿ ರಾಷ್ಟದಲ್ಲಿಯೇ ಎನ್.ಎಸ್.ಎಸ್. ಅನುಷ್ಠಾನಕ್ಕೆ ಮಾದರಿಯಾಗಿದೆ. ಸ್ವಯಂ ಸೇವಕರ ಡೇಟಾಬೇಸ್ ಯೋಜನೆಯನ್ನು ಈಗ ಅನುಷ್ಠಾನಗೊಳಸಲಾಗುತ್ತಿದೆ. ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಗುರುತಿಸಲಾದ 750 ದತ್ತು ಗ್ರಾಮಗಳಲ್ಲಿ ಅಮೃತ ಸಮುದಾಯ ಅಭಿವೃದ್ಧಿ ಯೋಜನೆಯನ್ನು 450ಕ್ಕೂ ಹೆಚ್ಚು ಶೈಕ್ಷಣಿಕ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಸಲಾಗುತ್ತಿದೆ. ಅಲ್ಲದೆ ಸದರಿ ಗ್ರಾಮದಲ್ಲಿ ಕಾನೂನು ಅರಿವು ಮೂಡಿಸುವ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ.

# ಆಯುವ್ಯಯ ಹಂಚಿಕೆ ಮತ್ತು ಬಳಕೆ

2022-23ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನಾ ಕೋಶದ ಆಯವ್ಯಯ ಮತ್ತು ಹಂಚಿಕೆ ಮತ್ತು ಬಳಕೆಯಾದ ಅನುದಾನ ಕೆಳಗಿನಂತಿದೆ.

| | | ಅನುದಾನ ಹಂಚಿಕೆ ಲಕ್ಷರೂಗಳಲ್ಲಿ | ಬಿಡುಗಡೆಯಾದ ಅನುದಾನ ಲಕ್ಷರೂಗಳಲ್ಲಿ | ಬಿಡುಗಡೆಯಾದ ಅನುದಾನದಲ್ಲಿ ಬಳಕೆಯಾದ ಅನುದಾನ ಲಕ್ಷ ರೂ ಗಳಲ್ಲಿ | ಶೇಕಡಾವಾರು |
|---|---|---|---|---|---|
| 2022-23 | ಕೇಂದ್ರ ಸರ್ಕಾರ | 2407.50 | 2148.71 | 2148.71 | 90.00% |
| | ರಾಜ್ಯ ಸರ್ಕಾರ | 444.69 | 440.69 | 436.40 | 99.00% (ಯೋಜನೆ 100%) |

2022-23ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು 2407.50 ಲಕ್ಷ ರೂ.ಗಳನ್ನು ಹಂಚಿಕೆ ಮಾಡಿ, ಬಿಡುಗಡೆ ಮಾಡಿದ್ದು ಸದರಿ ಅನುದಾನದಲ್ಲಿ ರೂ. 2148.71 ಲಕ್ಷ ರೂ.ಗಳನ್ನು (ಶೇಕಡ 97.66) ರಾಷ್ಟ್ರೀಯ ಸೇವಾ ಯೋಜನಾ ಕೋಶವು ದೈನಂದಿನ ಚಟುವಟಿಕೆಗಳು ಮತ್ತು ವಿಶೇಷ ಶಿಬಿರಗಳ ಅನುಷ್ಠಾನಕ್ಕಾಗಿ ವಿಶ್ವ ವಿದ್ಯಾಲಯಗಳು ಮತ್ತು ನಿರ್ದೇಶನಾಲಯಗಳಿಗೆ ಬಿಡುಗಡೆ ಮಾಡಿದೆ.

2022-23ನೇ ಸಾಲಿನಲ್ಲಿ ರಾಜ್ಯ ಸರ್ಕಾರವು 444.69 ಲಕ್ಷ ರೂ.ಗಳನ್ನು ಹಂಚಿಕೆ ಮಾಡಿದ್ದು, ರಾಜ್ಯ ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 436.40 ಲಕ್ಷ ರೂ.ಗಳ ಬಳಕೆಯಾಗಿದೆ.

## 2022-23ನೇ ಸಾಲಿಗೆ ಸ್ವಯಂಸೇವಕರ ಹಂಚಿಕೆ ಮತ್ತು ದಾಖಲಾತಿ

| | | ಕೇಂದ್ರ ಸರ್ಕಾರ |
|---|---|---|
| 01 | ದೈನಂದಿನ ಚಟುವಟಿಕೆ | 3,21,000 |
| 02 | ವಿಶೇಷ ಶಿಬಿರಗಳು | 1,60,500 |

## ದೈನಂದಿನ ಚಟುವಟಿಕೆಗಳಿಗೆ ಸ್ವಯಂಸೇವಕರ ಹಂಚಿಕೆ ಮತ್ತು ದಾಖಲಾತಿ

| ಸ್ವಯಂಸೇವಕರ ಹಂಚಿಕೆ | ದಾಖಲಾದ ಸ್ವಯಂಸೇವಕರು | ಸ್ವಯಂ-ಸೇವಕರು | ಸ್ವಯಂ-ಸೇವಕಿಯರು | ಪ.ಜಾ | ಪ.ವರ್ಗ | ಹಿಂ.ವರ್ಗ | ಅಲ್ಪ ಸಂಖ್ಯಾತರು | ಇತರೆ |
|---|---|---|---|---|---|---|---|---|
| 3,21,000 | 6,00,000 | 3,40,000 | 2,60,000 | 1,06,200 | 44,400 | 1,26,000 | 90,000 | 2,33,400 |

# ವಿಶೇಷ ಶಿಬಿರ ಕಾರ್ಯಕ್ರಮಗಳು 2022-23

| ಸ್ವಯಂಸೇವಕರ ಹಂಚಿಕೆ | ಶಿಬಿರದ ಗುರಿ | ಸಾಧನೆ (ಆಯೋಜಿಸಿದ ಶಿಬಿರಗಳು) | ಭಾಗವಹಿಸಿದ ಸ್ವಯಂಸೇವಕರು | | |
|---|---|---|---|---|---|
| | | | ಸ್ವಯಂಸೇವಕರು | ಸ್ವಯಂಸೇವಕಿಯರು | ಒಟ್ಟು |
| 1,21,000 | 3,210 (ಸ್ವ ಆರ್ಥಿಕ ಘಟಕಗಳನ್ನು ಒಳಗೊಂಡಂತೆ) | 2,500 | 2,00,000 | 1,75,000 | 3,75,000 |

## ಸ್ವ ಆರ್ಥಿಕ ಘಟಕಗಳು

| | |
|---|---|
| 2790 ಸ್ವ ಆರ್ಥಿಕ ಘಟಕಗಳು | 2,79,000 ಸ್ವಯಂಸೇವಕ/ಸೇವಕಿಯರು |

## ವಿಶ್ವ ವಿದ್ಯಾನಿಲಯ ಮತ್ತು ನಿರ್ದೇಶನಾಲಯಗಳು ನೀಡಿದ ವರದಿಯ ಆಧಾರದ ಮೇಲೆ ಕೆಲವು ಮಹತ್ವದ ಸಾಧನೆಗಳು

| | | |
|---|---|---|
| ರಕ್ತ ದಾನ | | 1,000 ಕ್ಕೂ ಹೆಚ್ಚಿನ ರಕ್ತದಾನ ಶಿಬಿರಗಳು<br>65,000 ಯೂನಿಟ್‌ಗಳ ರಕ್ತದಾನ |
| ಪಲ್ಸ್ ಪೋಲಿಯೋ | | 10,000 ಸ್ವಯಂಸೇವಕ/ಸೇವಕಿಯರು ಭಾಗವಹಿಸಿ, ಸುಮಾರು 3.00 ಲಕ್ಷ ಮಕ್ಕಳಿಗೆ ಲಸಿಕೆ ಹಾಕಲಾಗಿದೆ. |
| ಒಟ್ಟು ನೆಟ್ಟ ಗಿಡಗಳ ಸಂಖ್ಯೆ | | ಸುಮಾರು 4,00,000 |
| ಉಪಯುಕ್ತ ಆಸ್ತಿ ನಿರ್ಮಾಣ | | ಅಜಿದಾಜು ರೂ. 12.00 ಕೋಟಿ |
| ವಿಶೇಷ ವಾರ್ಷಿಕ ಶಿಬಿರಗಳು | | 2,500 |
| ಆರೋಗ್ಯ ಶಿಬಿರಗಳು | | 1600 (ರಕ್ತದಾನ ಶಿಬಿರ ಸೇರಿ) |
| ಅರಿವು ಮೂಡಿಸುವ ಜಾಥಾ ಮತ್ತು ಶಿಬಿರಗಳು | | 9,000 |
| ರಾಜ್ಯ ಮಟ್ಟದ ಶಿಬಿರಗಳು | | 10 |
| ಜಿಲ್ಲಾ ಮತ್ತು ವಿಶ್ವ ವಿದ್ಯಾನಿಲಯ ಮಟ್ಟದ ಶಿಬಿರಗಳು | | 80 |

2022- 23ನೇ ಸಾಲಿನಲ್ಲಿ ಅನುದಾನವು ಹಲವಾರು ಆನ್‌ಲೈನ್ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

# ವಿಶ್ವ ವಿದ್ಯಾನಿಲಯ ಮತ್ತು ನಿರ್ದೇಶನಾಲಯಗಳಿಗೆ ಸ್ವಯಂಸೇವಕರ ಹಂಚಿಕೆ

| ಕ್ರಂ. ಸಂ. | ವಿಶ್ವವಿದ್ಯಾನಿಲಯ/ನಿರ್ದೇಶನಾಲಯಗಳ ಹೆಸರು | ಸ್ವಯಂಸೇವಕರ ಸಂಖ್ಯೆ | |
|---|---|---|---|
| | | ದೈನಂದಿನ ಕಾರ್ಯಕ್ರಮ | ವಿಶೇಷ ಶಿಬಿರಗಳು |
| 01. | ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | 80000 | 40000 |
| 02. | ಉದ್ಯೋಗ ಮತ್ತು ತರಬೇತಿ, ಬೆಂಗಳೂರು. | 00000 | 00000 |
| 03. | ತಾಂತ್ರೀಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | 11000 | 5500 |
| 04. | ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿ., ಬೆಂಗಳೂರು. | 2000 | 1000 |
| 05. | ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು. | 7000 | 3500 |
| 06. | ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿವಿ., ಬೆಂಗಳೂರು. | 21500 | 10750 |
| 07. | ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. | 19200 | 9600 |
| 08. | ಮಂಗಳೂರು ವಿಶ್ವವಿದ್ಯಾನಿಲಯ, ಹಂಪನಕಟ್ಟಾ, ಮಂಗಳೂರು. | 15700 | 7850 |
| 09. | ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಗುಲ್ಬರ್ಗಾ. | 15000 | 7500 |
| 10. | ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ, ಬೆಳಗಾವಿ | 21900 | 10950 |
| 11. | ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ | 11700 | 5850 |
| 12. | ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ | 10000 | 5000 |
| 13. | ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ. | 19500 | 9750 |
| 14. | ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | 9000 | 4500 |
| 15. | ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ. | 9000 | 4500 |
| 16. | ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ, ಬಳ್ಳಾರಿ. | 8000 | 4000 |
| 17. | ವಿಶ್ವೇಶ್ವರಯ್ಯ ತಾಂತ್ರೀಕ ವಿಶ್ವವಿದ್ಯಾನಿಲಯ, ಬೆಳಗಾಂ. | 5500 | 2750 |
| 18. | ಕರ್ನಾಟಕ ಕಾನೂನು ವಿಶ್ವವಿದ್ಯಾನಿಲಯ, ಹುಬ್ಬಳ್ಳಿ. | 5000 | 2500 |
| 19 | ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯ, ಬೆಂಗಳೂರು. | 2500 | 1250 |
| 20. | ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯ, ಧಾರವಾಡ. | 2500 | 1250 |
| 21. | ಕೆ.ಎಲ್.ಇ. ವಿಶ್ವವಿದ್ಯಾನಿಲಯ, ಬೆಳಗಾವಿ. | 1700 | 850 |
| 22. | ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯ, ರಾಯಚೂರು. | 600 | 300 |
| 23. | ತೋಟಗಾರಿಕಾ ವಿಜ್ಞಾನ ವಿಶ್ವವಿದ್ಯಾನಿಲಯ, ಬಾಗಲಕೋಟೆ. | 1800 | 900 |
| 24. | ತೋಟಗಾರಿಕೆ ವಿಜ್ಞಾನ ವಿಶ್ವವಿದ್ಯಾನಿಲಯ, ಶಿವಮೊಗ್ಗ. | 1000 | 500 |
| 25. | ಕ.ರಾ. ಪಶುವೈದ್ಯ, ಪ್ರಾಣಿ, ಮತ್ತು ಮೀ., ವಿಜ್ಞಾನ ವಿವಿ, ಬೀದರ್. | 1000 | 500 |
| 26. | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ, ಚಾಮರಾಜಪೇಟೆ. | 1000 | 500 |
| 27. | ನಿಟ್ಟೇ ವಿಶ್ವವಿದ್ಯಾನಿಲಯ, ಮಂಗಳೂರು. | 1200 | 600 |
| 28. | ಯೆನೆಪೋಯ ವಿಶ್ವವಿದ್ಯಾನಿಲಯ, ಮಂಗಳೂರು. | 5000 | 2500 |
| 29. | ಜೆ.ಎಸ್.ಎಸ್. ಅಕಾಡೆಮಿ ಆಫ್ ಹೈ.ಎ. & ರಿಸರ್ಚ್ ಮೈಸೂರು. | 600 | 300 |
| 30. | ಶ್ರೀ ಸಿದ್ದಾರ್ಥ ವಿಶ್ವವಿದ್ಯಾನಿಲಯ, ತುಮಕೂರು. | 100 | 50 |
| 31. | ಶ್ರೀ ದೇವರಾಜ ಅರಸ್ ಅಕಾಡೆಮಿ ಆಫ್ ಹೈ.ಎ. & ರಿಸರ್ಚ್, ಕೋಲಾರ. | 200 | 100 |
| 32. | ಕನ್ನಡ ವಿಶ್ವವಿದ್ಯಾನಿಲಯ, ಹಂಪಿ. | 200 | 100 |
| 33. | ಕ.ರಾ.ಡಾ.ಗಂ.ಹಾನಗಲ್ ಮ್ಯೂ.ಅಂಡ್ ಪ.ಆರ್ಟ್ಸ್ ವಿವಿ, ಮೈಸೂರು, | 100 | 50 |

| | | | |
|---|---|---|---|
| 34. | ನಿಮ್ಹಾನ್ಸ್, ಕಾಲೇಜ್ ಆಫ್ ನರ್ಸಿಂಗ್, ಬೆಂಗಳೂರು | 100 | 50 |
| 35. | ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು | 8600 | 4300 |
| 36. | ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯ, ಕೋಲಾರ | 6000 | 3000 |
| 37. | ಬಿ.ಎಲ್.ಡಿ.ಇ. ವಿಶ್ವವಿದ್ಯಾನಿಲಯ, ವಿಜಯಪುರ | 200 | 100 |
| 38. | ಗಾರ್ಡನ್ ಸಿಟಿ ವಿಶ್ವವಿದ್ಯಾನಿಲಯ, ಬೆಂಗಳೂರು | 100 | 50 |
| 39. | ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಗೊಟಗೊಡಿ, ಹಾವೇರಿ | 300 | 150 |
| 40. | ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ವಿಶ್ವವಿದ್ಯಾನಿಲಯ, ಉಜಿರೆ | 600 | 300 |
| 41. | ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾನಿಲಯ, ಬೆಂಗಳೂರು | 400 | 200 |
| 42. | ಅಲಯನ್ಸ್ ವಿಶ್ವವಿದ್ಯಾಲಯ, ಬೆಂಗಳೂರು | 300 | 150 |
| 43. | ಶ್ರೀ ಆದಿಚುಂಚನಗಿರಿ ವಿಶ್ವವಿದ್ಯಾನಿಲಯ, ಮಂಡ್ಯ | 2100 | 1050 |
| 44. | ಎನ್.ಐ.ಟಿ.ಕೆ , ಸುರತ್ಕಲ್ , ಕರ್ನಾಟಕ | 100 | 50 |
| 45. | ಗೀತಂ ವಿಶ್ವವಿದ್ಯಾನಿಲಯ, ಬೆಂಗಳೂರು | 100 | 50 |
| 46. | ಎಸ್ ವ್ಯಾಸ್ ವಿಶ್ವವಿದ್ಯಾನಿಲಯ, ಜಿಗಣಿ, ಆನೆಕಲ್ | 100 | 50 |
| 47. | ಪ್ರೆಸಿಡೆನ್ಸಿ ವಿಶ್ವವಿದ್ಯಾನಿಲಯ, ಬೆಂಗಳೂರು | 800 | 450 |
| 48. | ದಯಾನಂದ ಸಾಗರ ವಿಶ್ವವಿದ್ಯಾನಿಲಯ, ಬೆಂಗಳೂರು | 100 | 50 |
| 49. | ರೇವ ವಿಶ್ವವಿದ್ಯಾನಿಲಯ, ಬೆಂಗಳೂರು | 1200 | 600 |
| 50. | ಶರಣಬಸವ ವಿಶ್ವವಿದ್ಯಾನಿಲಯ, ಕಲಬುರ್ಗಿ | 100 | 50 |
| 51. | ಕರ್ನಾಟಕ ರಾಜ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾನಿಲಯ, ಗದಗ | 600 | 300 |
| 52. | ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ, ಧಾರವಾಡ | 100 | 50 |
| 53. | ಮಂಡ್ಯ ವಿಶ್ವವಿದ್ಯಾನಿಲಯ, ಮಂಡ್ಯ | 300 | 150 |
| 54. | ರಾಯಚೂರು ವಿಶ್ವವಿದ್ಯಾನಿಲಯ, ರಾಯಚೂರು | 8000 | 4000 |
| 55. | ಜೆ.ಎಸ್.ಎಸ್. ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ, ಮೈಸೂರು. | 200 | 100 |
| | **ಒಟ್ಟು :** | **321000** | **160500** |
| | **ಸ್ವ ಆರ್ಥಿಕ ಘಟಕಗಳು** | | |
| 56. | ಸಿ.ಎಂ.ಆರ್. ವಿಶ್ವವಿದ್ಯಾನಿಲಯ, ಬೆಂಗಳೂರು | 100 | 50 |
| 57. | ಕೆ.ಎಲ್.ಇ. ತಾಂತ್ರಿಕ ವಿಶ್ವವಿದ್ಯಾನಿಲಯ, ಹುಬ್ಬಳ್ಳಿ | 100 | 50 |
| 58. | ಎಂ.ಎಸ್ ರಾಮಯ್ಯ ಅಪ್ಲೈಡ್ ಸೈನ್ಸಸ್ ವಿಶ್ವವಿದ್ಯಾಲಯ | 100 | 50 |
| 59. | ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ, ಬೆಂಗಳೂರು | 100 | 50 |
| 60. | ಸೆಂಟ್ ಜೋಸೆಫ್ ವಿಶ್ವವಿದ್ಯಾಲಯ, ಬೆಂಗಳೂರು | 200 | 100 |
| 61. | ಚಾಣಕ್ಯ ವಿಶ್ವವಿದ್ಯಾಲಯ, ಬೆಂಗಳೂರು | 500 | 250 |
| 62. | ಮಣಿಪಾಲ್ ಅಕಾಡಮಿ ಆಫ್ ಹೈಯರ್ ಎಜುಕೇ μ 'ನ್, | 500 | 250 |
| 63. | ನೃಪತುಂಗ ವಿಶ್ವವಿದ್ಯಾಲಯ, ಬೆಂಗಳೂರು. | 500 | 250 |

| | | | |
|---|---|---|---|
| 64. | ಸೆಂಟ್ರಲ್ ವಿಶ್ವವಿದ್ಯಾಲಯ, ಕಲಬುರಗಿ | 100 | 50 |
| 65. | ಶ್ರೀನಿವಾಸ್ ವಿಶ್ವವಿದ್ಯಾಲಯ, ಮಂಗಳೂರು | 100 | 50 |
| 66. | ಮೌಲಾನ ಆಜಾದ್ ರಾಷ್ಟ್ರೀಯ ಉರ್ದು ವಿಶ್ವವಿದ್ಯಾಲಯ, ಬೆಂಗಳೂರು | 100 | 50 |
| 67. | ಜೈನ್ ವಿಶ್ವವಿದ್ಯಾಲಯ, ಬೆಂಗಳೂರು | 800 | 400 |

| **ಕಾರ್ಯಕ್ರಮಗಳು** | | **ಭಾಗವಹಿಸಿದವರು / ಪ್ರಯೋಜನ ಪಡೆದವರ ಸಂಖ್ಯೆ** |
|---|---|---|
| ನಿರಂತರ ಸ್ವಚ್ಛತಾ ಚಟುವಟಿಕೆಗಳು | : | 1,50,000+ |
| ರಾಷ್ಟ್ರೀಯ ಭಾವೈಕ್ಯತಾ ಶಿಬಿರ | : | 1500 |
| ಸ್ವಾಮಿ ವಿವೇಕಾನಂದ ಜಯಂತಿ: ಯುವ ಸಪ್ತಾಹ | : | 1,41,300 |
| ಜೀವನ ಕೌಶಲ್ಯ ಶಿಕ್ಷಣ ಮತ್ತು ಆಪ್ತ ಸಲಹೆ | : | 7,30,000 |
| ಯುವ ಜನೋತ್ಸವ | : | 10,000 |
| ಅಮೃತ ಸಮುದಾಯ ಅಭಿವೃದ್ಧಿ ಯೋಜನೆ | : | 3,50,000+ |
| ಸೈಬರ್ ಸೇಫ್ ಕರ್ನಾಟಕ | : | 12,000 |
| Good Governance Week ಕಾರ್ಯಕ್ರಮ | : | 85,250 |
| ಕಾನೂನು ಉಚಿತ ಸೇವೆ ಮತ್ತು ಜಾಗೃತಿ ಕಾರ್ಯಕ್ರಮ | : | 89,000 |
| ಕ್ಲೀನ್ ಇಂಡಿಯಾ | : | 2,02,001 |
| ಫಿಟ್ ಇಂಡಿಯಾ | : | 45,000 |
| ಕ್ಯಾನ್ಸರ್ ಅರಿವು ಮತ್ತು ತಪಾಸಣೆ ಕಾರ್ಯಕ್ರಮಗಳು | : | 40,000 |

# 2022-23 ನೇ ಸಾಲಿನ ಮುಖ್ಯ ಕಾರ್ಯಕ್ರಮಗಳು ಮತ್ತು ಯೋಜನೆಗಳು

## ಅಮೃತ ಸಮುದಾಯ ಅಭಿವೃದ್ಧಿ ಯೋಜನೆ ಅನುಷ್ಠಾನ

ಅಮೃತ ಸಮುದಾಯ ಅಭಿವೃದ್ಧಿ ಯೋಜನೆಗೆ ದಿನಾಂಕ: 05, ಜನವರಿ 2022ರಂದು ಚಾಲನೆ ನೀಡಲಾಯಿತು. ಈ ಯೋಜನೆಯಡಿಯಲ್ಲಿ 750 ಗ್ರಾಮಗಳನ್ನು, 450 ಶೈಕ್ಷಣಿಕ ಸಂಸ್ಥೆಗಳು ದತ್ತು ಪಡೆದುಕೊಂಡು ರಾಷ್ಟ್ರೀಯ ಸೇವಾ ಯೋಜನೆಯ ದೈನಂದಿನ ಚಟುವಟಿಕೆಗಳ ಮತ್ತು ವಿಶೇಷ ಶಿಬಿರ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಎಸ್.ಡಿ.ಜಿ.ಸಿ.ಸಿ ಸಹಯೋಗದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

## ಅಮೃತ ಸಮುದಾಯ ಯೋಜನೆಯಡಿಯಲ್ಲಿ ದತ್ತು ಪಡೆದ ಗ್ರಾಮಗಳಲ್ಲಿ ಹಮ್ಮಿಕೊಂಡ ಗಮನಾರ್ಹ ಕಾರ್ಯಕ್ರಮಗಳು

ಯೆನೆಪೋಯ ವಿಶ್ವವಿದ್ಯಾನಿಲಯದಿಂದ ಕವತಾರ್ ದತ್ತು ಗ್ರಾಮದಲ್ಲಿ ಆರೋಗ್ಯ ತಪಾಸಣೆ ಮಾಡಿ, ಹಿಮೋಗ್ಲೋಬಿನ್ ಕೊರತೆ ಬಗ್ಗೆ ಮಾಹಿತಿ ಸಂಗ್ರಹಿಸಿ, ಕಬ್ಬಿಣಾಂಶದ ವಿಟಮಿನ್ ಮಾತ್ರೆಗಳನ್ನು ಅಗತ್ಯವಿದ್ದವರಿಗೆ ಉಚಿತವಾಗಿ ವಿತರಿಸಲಾಗಿದೆ. ಆನಂತರ ಗ್ರಾಮದಲ್ಲಿ ಸಮೀಕ್ಷೆ ನಡೆಸಿ, ಗ್ರಾಮದಲ್ಲಿ ಹಿಮೋಗ್ಲೋಬಿನ್ ಅಂಶವು ಏರಿಕೆ ಕಂಡಿರುವುದು ವಿಶೇಷವಾಗಿದೆ. ಅಲ್ಲದೇ 300 ಶಾಲಾ ಮಕ್ಕಳಿಗೆ ಮೊಟ್ಟೆ ಮತ್ತು ವಿಟಮಿನ್ ಪೋಷಕಾಂಶದ ಪೌಡರ್ ನ್ನು ವಿತರಿಸಲಾಗಿದೆ.

ಶ್ರೀ ಸತ್ಯಸಾಯಿ ಅನ್ನಪೂರ್ಣ ಟ್ರಸ್ಟ್ ಸಹಯೋಗದೊಂದಿಗೆ ಮಂಡ್ಯ, ರಾಯಚೂರು, ಯಾದಗಿರಿ ಗುಲ್ಬರ್ಗ ಜಿಲ್ಲೆಗಳಲ್ಲಿ ಅಮೃತ ಸಮುದಾಯ ಅಭಿವೃದ್ಧಿ ಯೋಜನೆಯಡಿಯಲ್ಲಿ ದತ್ತು ಪಡೆದಿರುವ ಗ್ರಾಮಗಳ 84656 ಕ್ಕೂ ಹೆಚ್ಚು ಮಕ್ಕಳಿಗೆ ನ್ಯೂಟ್ರಿಶನ್ ಪೌಡರ್ ನ್ನು ನೀಡಲಾಗಿದೆ.

| District | No. of Students | Oct- Saisure in Kgs | Nov- SaiSure in Kgs | Total | SaiSure in Kgs |
|---|---|---|---|---|---|
| Raichur | 26910 | 3394 | 2723.5 | 6117.5 | 19208.5 |
| Yadgir | 56628 | 7123.5 | 5712 | 12835.5 | |
| Gulbarga | 1118 | 142 | 113.5 | 255.5 | |



ಮೈಸೂರು ವಿಶ್ವವಿದ್ಯಾನಿಲಯ ವತಿಯಿಂದ ನೆಲೆಮನೆ ದತ್ತುಗ್ರಾಮದಲ್ಲಿ ಲೋಕ ಅದಾಲತ್ ಕಾರ್ಯಕ್ರಮವನ್ನು ಯಶಸ್ವಿಯಾಗಿ ಹಮ್ಮಿಕೊಳ್ಳಲಾಯಿತು. ಇದು ಗ್ರಾಮಸ್ಥರ ಪ್ರಶಂಸೆಗೆ ಪಾತ್ರವಾಯಿತು.

ಅಮೃತ ಸಮುದಾಯ ಅಭಿವೃದ್ಧಿ ಯೋಜನೆಯಡಿಯಲ್ಲಿ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಸ್ಮಾರಕಗಳ ಸಂರಕ್ಷಣೆ ಮತ್ತು ನಿರ್ವಹಣೆ ಮತ್ತು ಸಮುದಾಯದಲ್ಲಿ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆಯ ಬಗ್ಗೆ ಪ್ರಜ್ಞೆ ಮೂಡಿಸಲಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ವತಿಯಿಂದ ದತ್ತುಗ್ರಾಮಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸಹಯೋಗದೊಂದಿಗೆ ಮನೆ ಮನೆಗೆ ತೆರಳಿ ಸಾಂಕ್ರಾಮಿಕ ರೋಗಗಳಾದ ಕೋವಿಡ್–19, ಸಿಡುಬು, ಕಾಲರಾ, ಪ್ಲೇಗ್, ಮಲೇರಿಯಾ, ಮುಂತಾದ ಮಾರಕ ಸಾಂಕ್ರಾಮಿಕ ರೋಗಗಳ ಬಗ್ಗೆ ಅರಿವನ್ನು ಮೂಡಿಸಿ ಮುಂಜಾಗೃತಾಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

ದಾವಣಗೆರೆ ವಿಶ್ವವಿದ್ಯಾಲಯದಿಂದ ಚಿತ್ರದುರ್ಗದಲ್ಲಿ ರೈತರಿಗೆ 18 ಮಣ್ಣಿನ ಕಾರ್ಡ್ ವಿತರಣೆ, ೮ ಹಿರಿಯ ನಾಗರಿಕರಿಗೆ ಪಿಂಚಣಿ ವ್ಯವಸ್ಥೆ ಕಲ್ಪಿಸಿರುವುದು, ೩೩ ಕುಟುಂಬಗಳಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಮತ್ತು ಪಹಣಿ ಒದಗಿಸಿರುವುದು ಹಾಗೂ ಹೃದಯ ತಪಾಸಣೆ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ.

ಯೆನೆಪೋಯ ವಿಶ್ವವಿದ್ಯಾಲಯ, ದಾವಣಗೆರೆ ವಿಶ್ವವಿದ್ಯಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಅಂಧತ್ವ ನಿಯಂತ್ರಣ ಸಮಿತಿ ಸಹಯೋಗದಲ್ಲಿ ದತ್ತು ಗ್ರಾಮಗಳಲ್ಲಿ ಉಚಿತ ನೇತ್ರ ತಪಾಸಣೆ ಮತ್ತು ಕನ್ನಡಕ ವಿತರಣೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ದತ್ತು ಪಡೆದ 750 ಹಳ್ಳಿಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಈ ಕಾರ್ಯಕ್ರಮಗಳಲ್ಲಿ ಪ್ರಮುಖವಾಗಿ ಕಾನೂನು ಅರಿವು ಕಾರ್ಯಕ್ರಮಗಳು, ಸ್ವಚ್ಛತಾ ಕಾರ್ಯಕ್ರಮಗಳು, ಮಾದಕ ವ್ಯಸನ ಜಾಗೃತಿ ಕಾರ್ಯಕ್ರಮಗಳು, ಬ್ಯಾಂಕಿಂಗ್ ಅರಿವು ಕಾರ್ಯಕ್ರಮಗಳು, ಸರ್ಕಾರದ ವಿವಿಧ ಯೋಜನೆಗಳ ಕಾರ್ಯಕ್ರಮಗಳು, ರಕ್ತದಾನ ಶಿಬಿರಗಳಂತಹ 3,087 ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅಲ್ಲದೇ 150ಕ್ಕೂ ಹೆಚ್ಚು ಆರೋಗ್ಯ ಶಿಬಿರಗಳು, 331ಕ್ಕೂ ಹೆಚ್ಚು ಶೌಚಾಲಯಗಳ ನಿರ್ಮಾಣ, 60,000 ಕ್ಕೂ ಹೆಚ್ಚು ಗಿಡ ನೆಡುವಿಕೆ ಕಾರ್ಯಕ್ರಮಗಳನ್ನು ದತ್ತು ಪಡೆದ ಗ್ರಾಮಗಳಲ್ಲಿ ನಡೆಸಲಾಗಿದ್ದು, ಈ ಕಾರ್ಯಕ್ರಮಗಳಿಂದ 3,50,000 ಕ್ಕೂ ಹೆಚ್ಚು ಫಲಾನುಭವಿಗಳಾಗಿದ್ದಾರೆ. ಇದುವರೆಗೂ ಅಮೃತ ಸಮುದಾಯ ಸರ್ವೆ ಅಪ್ಲಿಕೇಶನ್ ಮೂಲಕ 46548+ ದತ್ತು ಗ್ರಾಮದಲ್ಲಿ ಅಗತ್ಯ ವಿರುವ ಸರ್ಕಾರದ ಯೋಜನೆಯ ಕಾರ್ಡ್‌ಗಳ ಮಾಹಿತಿಯ ಕುರಿತು ಸಮೀಕ್ಷೆ ನಡೆಸಲಾಗಿದೆ.










# ಸ್ವಾತಂತ್ರ್ಯ ಅಮೃತ ಮಹೋತ್ಸವ

ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾಗಿದ್ದು, ಈ ಸುಸಂದರ್ಭದಲ್ಲಿ ಕೇಂದ್ರ ಸರ್ಕಾರದ ಆದೇಶದ ಮೇರೆಗೆ ಫೆಬ್ರವರಿ 2021 ರಿಂದ ಆಗಸ್ಟ್ 2022 ರವರೆಗೆ ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಹಲವಾರು ಕಾರ್ಯಕ್ರಮಗಳನ್ನು ವಿಶ್ವವಿದ್ಯಾಲಯ ಮತ್ತು ನಿರ್ದೇಶನಾಲಯಗಳ ಮಟ್ಟದಲ್ಲಿ ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿಗಳ ಹಾಜರಾತಿಯನ್ನು ಹೆಚ್ಚಿಸುವ ಸಲುವಾಗಿ ಮತ್ತು ವಿದ್ಯಾರ್ಥಿಗಳನ್ನು ಶಾಲೆಗೆ ಆಕರ್ಷಿಸಲು ಶಾಲೆಯ ಆವರಣವನ್ನು ವಿಶಿಷ್ಟ ಚಿತ್ರಗಳಿಂದ ಕ್ಯಾಂಪಸ್-ಟು-ಕಮ್ಯುನಿಟಿ ಸಂಸ್ಥೆಯ ಮೂಲಕ ಪೇಂಟಿಂಗ್ ಮಾಡಿಸಲಾಗುತ್ತಿದೆ.






# ಫಿಟ್ ಇಂಡಿಯಾ ಫ್ರೀಡಂ ರನ್

ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಫಿಟ್ ಇಂಡಿಯಾ ಫ್ರೀಡಂ ರನ್ ಕಾರ್ಯಕ್ರಮದಡಿ ವಿಶ್ವವಿದ್ಯಾಲಯ ಮತ್ತು ನಿರ್ದೇಶನಾಲಯಗಳ ಮಟ್ಟದಲ್ಲಿ ಸೈಕಲ್ ಜಾಥಾಗಳನ್ನು ಏರ್ಪಡಿಸಲಾಗಿದೆ.





# ಕ್ಲೀನ್ ಇಂಡಿಯಾ ಕಾರ್ಯಕ್ರಮ

ಸ್ವಾತಂತ್ರ್ಯ ಅಮೃತ ಮಹೋತ್ಸವ @75 ಇಂಡಿಯಾ ಅಂಗವಾಗಿ ಕ್ಲೀನ್ ಇಂಡಿಯಾ ಕಾರ್ಯಕ್ರಮವನ್ನು ವಿವಿಧ ವಿಶ್ವವಿದ್ಯಾಲಯಗಳಡಿ ಪ್ಲಾಸ್ಟಿಕ್ ನಿರ್ಮೂಲನಾ ಶಿಬಿರಗಳನ್ನು ಏರ್ಪಡಿಸಲಾಗಿದೆ.





# Being Safe reponders in case of Sexual Abuse ಕಾರ್ಯಕ್ರಮ

Enfold ProactiveTrust ವತಿಯಿಂದ ಅಂಗ ಸಬಲೀಕರಣ ಹಾಗೂ ಲೈಂಗಿಕ ಶೋಷಣೆ ಬಗ್ಗೆ ಮಕ್ಕಳಲ್ಲಿ ಮತ್ತು ವಯಸ್ಕರಲ್ಲಿ ಅರಿವು ಮೂಡಿಸಲು ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕ/ಸೇವಕಿಯರಿಗೆ ತರಬೇತಿ ನೀಡಿ ಸಮುದಾಯ ಸುರಕ್ಷಾ ರಾಯಬಾರಿಗಳಾಗಿ ತರಬೇತುದಾರರು ಜಾಲತಾಣದ ಮೂಲಕ ಕಾರ್ಯ ನಿರ್ವಹಿಸುತ್ತಿದ್ದಾರೆ.





# ಕಾನೂನು ಉಚಿತ ಸೇವೆ ಮತ್ತು ಜಾಗೃತಿ ಕಾರ್ಯಕ್ರಮಗಳು

ಅಮೃತ ಸಮುದಾಯ ಅಭಿವೃದ್ಧಿ ಯೋಜನೆಯಡಿ ಎಲ್ಲಾ ವಿಶ್ವವಿದ್ಯಾಲಯ ಮತ್ತು ನಿರ್ದೇಶನಾಲಯಗಳಲ್ಲಿ ಕಾನೂನು ಉಚಿತ ಸೇವೆ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಇವರನ್ನು ಕಾನೂನು ಉಚಿತ ಸೇವೆ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಗ್ರಾಮ ಮತ್ತು ತಾಲ್ಲೂಕು ಮಟ್ಟದಲ್ಲಿ ಹಮ್ಮಿಕೊಳ್ಳಲು ನೋಡಲ್ ವಿಶ್ವವಿದ್ಯಾಲಯವನ್ನಾಗಿ ಮಾಡಲಾಗಿದೆ. ರೂ 10 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.











**Good Governance Week:** ದಿನಾಂಕ 12.12.2022 ರಿಂದ 18.12.2022 ರವರೆಗೆ ಎಲ್ಲಾ ವಿಶ್ವವಿದ್ಯಾಲಯ ಮತ್ತು ನಿರ್ದೇಶನಾಲಯಗಳಲ್ಲಿ Good Governance Week ಆಚರಿಸಲಾಯಿತು. ಈ ಕಾರ್ಯಕ್ರಮವನ್ನು ಸ್ವಯಂ ಸೇವಕ/ ಸ್ವಯಂ ಸೇವಕಿಯರ ಮೂಲಕ ಕರ್ನಾಟಕ ಸರ್ಕಾರದ ಅನೇಕ ಯೋಜನೆಗಳ ಬಗ್ಗೆ ಗ್ರಾಮ ಮಟ್ಟದಲ್ಲಿ ಹಾಗೂ ಪಂಚಾಯತ್ ಮಟ್ಟದಲ್ಲಿ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಹಾಗೂ ರಾಜ್ಯ ಎನ್. ಎಸ್. ಎಸ್. ಕೋಶ, ಕರ್ನಾಟಕ ಸರ್ಕಾರ, ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ಯುನಿವರ್ಸಿಟಿ ಕಾನೂನು ಕಾಲೇಜು ಸಹಯೋಗದಲ್ಲಿ **Good Governance and Human Rights** ಶೀರ್ಷಿಕೆಯಡಿ ಒಂದು ದಿನದ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಯಿತು.






## ನಿರಂತರ ಸ್ವಚ್ಚತಾ ಚಟುವಟಿಕೆಗಳು

ಭಾರತ ಸರ್ಕಾರದ ಸ್ವಚ್ಛ ಭಾರತ ಯೋಜನೆಯನ್ವಯ 64 ವಿಶ್ವವಿದ್ಯಾಲಯಗಳು ಮತ್ತು 4 ನಿರ್ದೇಶನಾಲಯಗಳಿಂದ ಸುಮಾರು 2,25,000 ಸ್ವಯಂಸೇವಕರಿಗೆ ಸ್ವಚ್ಚತಾ ಪ್ರತಿಜ್ಞೆಯನ್ನು ನೀಡಿಲಾಗಿದೆ. ವಿಶ್ವವಿದ್ಯಾಲಯ ಮತ್ತು ನಿರ್ದೇಶನಾಲಯಗಳ ಸುಮಾರು 1,70,000 ಸ್ವಯಂಸೇವಕರನ್ನು ಒಳಗೊಂಡಂತೆ ಹಲವಾರು ಜಾಥಗಳನ್ನು ಆಯೋಜಿಸಿ ಜನರಲ್ಲಿ ಸ್ವಚ್ಚತೆಯ ಸಂದೇಶವನ್ನು ಹರಡಿರುತ್ತಾರೆ. ಅಲ್ಲದೆ ಒಂದು ದಿನದ ಸ್ವಚ್ಚತಾ ಕಾರ್ಯಕ್ರಮವನ್ನು ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಏರ್ಪಡಿಸಲಾಗಿದೆ. ಹಲವು ಕಾಲೇಜುಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರೇ ಕ್ಯಾಂಪಸ್ಗಳಲ್ಲಿ ನಿರಂತರ ಸ್ವಚ್ಛತಾ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ.







# ಅಂತರ ರಾಷ್ಟ್ರೀಯ ಯೋಗ ದಿನಾಚರಣೆ ಮತ್ತು ಯೋಗಥಾನ್

ರಾಷ್ಟ್ರೀಯ ಸೇವಾ ಯೋಜನೆ ಪ್ರಾದೇಶಿಕ ಕೇಂದ್ರ, ಭಾರತ ಸರ್ಕಾರ, ರಾಜ್ಯ ರಾಷ್ಟ್ರೀಯ ಸೇವಾ ಯೋಜನಾ ಕೋಶ, ಬೆಂಗಳೂರು ಮತ್ತು ವಿವಿಧ ವಿಶ್ವವಿದ್ಯಾಲಯಗಳ ಸಹಯೋಗದೊಂದಿಗೆ ಅಂತರರಾಷ್ಟ್ರೀಯ ಯೋಗ ದಿನಾಚರಣೆ ದಿನಾಂಕ: 22.06.2022ರಂದು ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕರಿಗಾಗಿ ಆನ್-ಲೈನ್ ಮತ್ತು ಆಫ್-ಲೈನ್ ನಲ್ಲಿ ಹಮ್ಮಿಕೊಳ್ಳಲಾಯಿತು. 26ನೇ ರಾಷ್ಟ್ರೀಯ ಯುವಜನೋತ್ಸವವನ್ನು ದಿನಾಂಕ: 12 ಜನವರಿಯಿಂದ 16 ಜನವರಿ 2023ರವರೆಗೆ ಧಾರವಾಡದಲ್ಲಿ ಹಮ್ಮಿಕೊಳ್ಳಲಾಯಿತು. ಸದರಿ ಕಾರ್ಯಕ್ರಮದಲ್ಲಿ ದಿನಾಂಕ 15, ಜನವರಿ 2023 ರಂದು ನಡೆದ ಯೋಗಥಾನ್ ಕಾರ್ಯಕ್ರಮವನ್ನು ಆಯೋಜಿಸಿದ್ದು, ಸುಮಾರು 4 ಲಕ್ಷಕ್ಕೂ ಹೆಚ್ಚು ಯೋಗಾಸಕ್ತರು ಭಾಗವಹಿಸಿದ್ದು ಇದು ಹೊಸ ಗಿನ್ನಿಸ್ ದಾಖಲೆಗೆ ಪಾತ್ರವಾಯಿತು.








## ರಾಜ್ಯ ಮಟ್ಟದ ಸಲಹಾ ಸಮಿತಿ ಸಭೆ

ರಾಜ್ಯ ಮಟ್ಟದ ಸಲಹಾ ಸಮಿತಿ ಸಭೆಯು ದಿನಾಂಕ 22.06.2022 ರಂದು ಕೊಠಡಿ ಸಂಖ್ಯೆ.419, ವಿಕಾಸ ಸೌಧದಲ್ಲಿ ಮಾನ್ಯ ಡಾ. ಕೆ.ಸಿ. ನಾರಾಯಣಗೌಡ, ಮಾನ್ಯ ಮಂತ್ರಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ 2021-22ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ಚಟುವಟಿಕೆಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ 2022-23ನೇ ಸಾಲಿನಲ್ಲಿ ನಡೆಸುವ ಚಟುವಟಿಕೆಗಳ ಬಗ್ಗೆ ತೀರ್ಮಾನಿಸಲಾಯಿತು. ಅದರಂತೆ, ದೈನಂದಿನ ಮತ್ತು ವಿಶೇಷ ಶಿಬಿರದ ಚಟುವಟಿಕೆಗಳ ಬಗ್ಗೆ, ಲೆಕ್ಕ ಪತ್ರಗಳ ಸಲ್ಲಿಸುವಿಕೆ, ಕಾರ್ಯಕ್ರಮ ಸಂಯೋಜನಾಧಿಕಾರಿಗಳನ್ನು ನೇಮಿಸುವ ಬಗ್ಗೆ ಚರ್ಚಿಸಲಾಯಿತು.



## ಹರ ಘರ್ ತಿರಂಗ:

75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಪ್ರಯುಕ್ತ "ಹರ್ ಘರ್ ತಿರಂಗ" ಅಭಿಯಾನವನ್ನು ವಿಧಾನಸೌಧ ದಲ್ಲಿ ಧ್ವಜ ಹಾರಿಸುವುದರ ಮೂಲಕ ಚಾಲನೆ ನೀಡಲಾಯಿತು. ಈ ಕಾರ್ಯಕ್ರಮವನ್ನು ರಾಜ್ಯ ಎನ್. ಎಸ್. ಎಸ್. ಕೋಶದ ವತಿಯಿಂದ ವಿಶ್ವವಿದ್ಯಾಲಯ ಮತ್ತು ನಿರ್ದೇಶನಾಲಯಗಳ ಮೂಲಕ ಸುಮಾರು 2.5 ಲಕ್ಷ ತಿರಂಗ ಧ್ವಜಗಳನ್ನು ವಿತರಣೆ ಮಾಡಲಾಯಿತು.






# ಕರ್ನಾಟಕ ಸರ್ಕಾರದ ರಾಷ್ಟ್ರೀಯ ಭಾವೈಕ್ಯತಾ ಶಿಬಿರದ ಆಯೋಜನೆ

2022-23ರಲ್ಲಿ ರಾಷ್ಟ್ರೀಯ ಭಾವೈಕ್ಯತಾ ಶಿಬಿರಗಳನ್ನು ಆಯೋಜಿಸಲು (1) ತಾಂತ್ರಿಕ ನಿರ್ದೇಶನಾಲಯ, ಬೆಂಗಳೂರು, (2) ಗುಲ್ಬರ್ಗ ವಿಶ್ವವಿದ್ಯಾಲಯ, ಕಲಬುರಗಿ, (3) ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, (4) ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, (5) ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು, (6) ಆದಿಚುಂಚನಗಿರಿ ವಿಶ್ವವಿದ್ಯಾಲಯ, ಮಂಡ್ಯ (7) ಮೈಸೂರು ವಿಶ್ವವಿದ್ಯಾಲಯ, ಮೈಸೂರು (8) ಕೆ.ಎಲ್.ಇ, ವಿಶ್ವವಿದ್ಯಾಲಯ, ಬೆಳಗಾವಿ, (9)ಯೆನೆಪೋಯ ವಿಶ್ವವಿದ್ಯಾಲಯ, ಮಂಗಳೂರು ಮತ್ತು (10) ರೇವಾ ವಿಶ್ವವಿದ್ಯಾಲಯ, ಬೆಂಗಳೂರು ಸೇರಿದಂತೆ ಒಟ್ಟು 10 ವಿಶ್ವವಿದ್ಯಾಲಯ/ನಿರ್ದೇಶನಾಲಯಗಳಿಗೆ ಕರ್ನಾಟಕ ಸರ್ಕಾರವು 50.00ಲಕ್ಷ ರೂ.ಗಳ ವಿಶೇಷ ಅನುದಾನವನ್ನು ಮಂಜೂರು ಮಾಡಿ ಬಿಡುಗಡೆ ಮಾಡಿದೆ.










# ಗಣರಾಜ್ಯೋತ್ಸವ ಪಥಸಂಚಲನ ಶಿಬಿರ

2022-23ನೇ ಸಾಲಿನ ಗಣರಾಜ್ಯೋತ್ಸವ ಪೂರ್ವಭಾವಿ ಪಥಸಂಚಲನದ ರಾಜ್ಯ ಮಟ್ಟದ ಆಯ್ಕೆ ಶಿಬಿರವನ್ನು ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ರವರ ಎಸ್‌ಡಿಎಂ ಆಯುರ್ವೇದ ಮಹಾವಿದ್ಯಾಲಯ, ಹಾಸನದಲ್ಲಿ ಸ್ವಯಂ ಸೇವಕರಿಗೆ ದಿನಾಂಕ:17.10.2022 ಮತ್ತು ದಿನಾಂಕ:18.10.2022 ರವರೆಗೆ ಹಾಗೂ ಸ್ವಯಂ ಸೇವಕಿಯರಿಗೆ ದಿನಾಂಕ:19.10.2022 ಮತ್ತು 20.10.2022 ರವರೆಗೆ ಆಯೋಜಿಸಲಾಗಿದೆ.

2023ನೇ ಸಾಲಿನ ಗಣರಾಜ್ಯೋತ್ಸವ ಪಥಸಂಚಲನ ಶಿಬಿರವು ದಿನಾಂಕ 14.01.2022ರಿಂದ ದಿನಾಂಕ 27.01.2023ರವರೆಗೆ ಎಸ್‌ಡಿಎಂ ಆಯುರ್ವೇದ ಮಹಾವಿದ್ಯಾಲಯ, ಹಾಸನ ಇಲ್ಲಿ ಆಯೋಜಿಸಲಾಗಿದೆ.

07 ಸ್ವಯಂಸೇವಕ/ಸೇವಕಿಯರು ಮತ್ತು ಒಬ್ಬರು ಕಾರ್ಯಕ್ರಮ ಅಧಿಕಾರಿ ನವದೆಹಲಿಯಲ್ಲಿ ದಿನಾಂಕ: 26.01.2023ರಂದು ನಡೆದ ರಾಷ್ಟ್ರ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಿರುತ್ತಾರೆ. ಸದರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ 15.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.
ದಿನಾಂಕ:26.01.2023ರಂದು ಮಾಣಿಕ್ ಷಾ ಪರೇಡ್ ಗ್ರೌಂಡ್ ನಲ್ಲಿ ನಡೆದ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ರಾಜ್ಯ ಎನ್ ಎಸ್ ಎಸ್ ತಂಡವು ಅತ್ಯುತ್ತಮ ಪ್ರಥಮ ತಂಡ ಪ್ರಶಸ್ತಿಯನ್ನು ಪಡೆದಿದೆ.








## 31.10.2022 ರಂದು ರಾಜ್ಯ ಮಟ್ಟದ "ರಾಷ್ಟ್ರೀಯ ಏಕ್ತಾ ದಿವಸ್" ಕಾರ್ಯಕ್ರಮದ ಆಚರಣೆ.

ದಿವಂಗತ ಸರ್ದಾರ್ ವಲ್ಲಭಾಯಿ ಪಟೇಲ್ ಇವರ ಜನ್ಮ ದಿನಾಚರಣೆ ಅಂಗವಾಗಿ ರಾಜ್ಯ ಮಟ್ಟದ "ರಾಷ್ಟ್ರೀಯ ಏಕ್ತಾ ದಿವಸ್" ಕಾರ್ಯಕ್ರಮವನ್ನು ದಿನಾಂಕ 31.10.2022 ರಂದು ರಾಷ್ಟ್ರೀಯ ಸೇವಾ ಯೋಜನಾ

## ಜೀವನ ಕೌಶಲ್ಯ ಶಿಕ್ಷಣ ಮತ್ತು ಆಪ್ತ ಸಲಹೆ ತರಬೇತಿ

ಜೀವನಕೌಶಲ್ಯ ಮತ್ತು ಆಪ್ತ ಸಲಹೆ ತರಬೇತಿಯನ್ನು ಬೆಂಗಳೂರಿನ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆಯ ಸಹಯೋಗದಲ್ಲಿ ಅನುಷ್ಠಾನಗೊಳಿಸಲಾಯಿತು. ಇದುವರೆಗೆ 124 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿ 3,474 ಕಾರ್ಯಕ್ರಮ ಅಧಿಕಾರಿಗಳಿಗೆ ತರಬೇತಿ ನೀಡಿದ್ದು, ಸದರಿ ಕಾರ್ಯಕ್ರಮ ಅಧಿಕಾರಿಗಳು 7,26,728 ಎನ್.ಎಸ್.ಎಸ್ ಸ್ವಯಂ ಸೇವಕರಿಗೆ/ವಿದ್ಯಾರ್ಥಿಗಳಿಗೆ ಆಪ್ತ ಸಲಹೆ ನೀಡಿದ್ದಾರೆ.







## ಮಹಾತ್ಮ ಗಾಂಧೀಜಿಯವರ ಜನ್ಮ ದಿನೋತ್ಸವದ ಅಂಗವಾಗಿ ಕಾರ್ಯಕ್ರಮ

ಮಹಾತ್ಮ ಗಾಂಧೀಜಿಯವರ ಜನ್ಮದಿನಾಚರಣೆ ಅಂಗವಾಗಿ ಗಾಂಧೀಜಿಯವರ ಜೀವನ ಮೌಲ್ಯಗಳ ಬಗ್ಗೆ ಅರಿವು ಕಾರ್ಯಕ್ರಮಗಳನ್ನು ವಿವಿಧ ವಿಶ್ವವಿದ್ಯಾಲಯ ಮತ್ತು ನಿರ್ದೇಶನಾಲಯಗಳಲ್ಲಿ ಹಮ್ಮಿಕೊಳ್ಳಲಾಯಿತು.

## 26ನೇ ರಾಷ್ಟ್ರೀಯ ಯುವಜನೋತ್ಸವ ಕಾರ್ಯಕ್ರಮ

26ನೇ ರಾಷ್ಟ್ರೀಯ ಯುವಜನೋತ್ಸವವನ್ನು ದಿನಾಂಕ: 12 ಜನವರಿಯಿಂದ 16 ಜನವರಿ 2023ರವರೆಗೆ ಧಾರವಾಡದಲ್ಲಿ ಹಮ್ಮಿಕೊಳ್ಳಲಾಗಿದ್ದು, ಯುವ ಶೃಂಗ ಸಭೆ, ಸಂಗೀತ ನೃತ್ಯ ಕಾರ್ಯಕ್ರಮಗಳು, ವಿಚಾರ-ಧಾರೆ ಹಾಗೂ ಸಾಹಸ ಕಾರ್ಯಕ್ರಮಗಳು ಗಮನಸೆಳೆದವು. ಸುಮಾರು 2000+ ಎನ್. ಎಸ್. ಎಸ್. ಸ್ವಯಂಸೇವಕ/ಸೇವಕಿಯರು ವಿವಿಧ ರಾಜ್ಯಗಳಿಂದ ಭಾಗವಹಿಸಿದ್ದರು.








## ರಾಜ್ಯ ಮಟ್ಟದ ಯುವಜನೋತ್ಸವ ಕಾರ್ಯಕ್ರಮ

ರಾಜ್ಯ ಸರ್ಕಾರದ ಅನುದಾನದಲ್ಲಿ  ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ ಮತ್ತು ರಾಯಚೂರು ವಿಶ್ವವಿದ್ಯಾಲಯ, ರಾಯಚೂರು ಯುವಜನೋತ್ಸವಗಳನ್ನು ಆಚರಿಸಲು ತಲಾ ರೂ.4.00 ಲಕ್ಷಗಳಂತೆ ಒಟ್ಟು ರೂ.16.00 ಲಕ್ಷಗಳನ್ನು ಮೇಲಿನ ವಿಶ್ವವಿದ್ಯಾಲಯಗಳಿಗೆ ಬಿಡುಗಡೆ ಮಾಡಿದೆ.











## ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭ

2020-21ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಗಳಲ್ಲಿ ಉತ್ತಮವಾಗಿ ಸೇವೆ ಸಲ್ಲಿಸಿದ ವಿಶ್ವವಿದ್ಯಾಲಯ, ಕಾರ್ಯಕ್ರಮಾಧಿಕಾರಿಗಳು ಹಾಗೂ ಸ್ವಯಂಸೇವಕ/ಸ್ವಯಂಸೇವಕಿಯರಿಗೆ ಪ್ರಶಸ್ತಿಗಳನ್ನು ದಿನಾಂಕ: 10 ಸೆಪ್ಟೆಂಬರ್, 2022ರಂದು ನಡೆದ ಪ್ರಶಸ್ತಿ ಪ್ರದಾನ ಸಮಾರಂಭವನ್ನು ರಾಜಭವನದಲ್ಲಿ ಗೌರವಾನ್ವಿತ ರಾಜ್ಯಪಾಲರ ಹಸ್ತದಿಂದ ಪ್ರಶಸ್ತಿ ಪ್ರದಾನ ಮಾಡಲಾಗಿದೆ. 2020-21ನೇ ಸಾಲಿನಲ್ಲಿ ರಾಜ್ಯದ ಸ್ವಯಂ ಸೇವಕಿಗೆ ಅತ್ಯುತ್ತಮ ಸ್ವಯಂ ಸೇವಕಿ ಎಂದು ರಾಷ್ಟ್ರ ಪ್ರಶಸ್ತಿ ನೀಡಲಾಗಿದೆ






## ಗಿಡ ನೆಡುವಿಕೆ ಕಾರ್ಯಕ್ರಮ:

ರಾಜ್ಯ ಎನ್. ಎಸ್. ಎಸ್. ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ವಿವಿಧ ಸಂಸ್ಥೆಗಳ ಸಹಯೋಗದೊಂದಿಗೆ ಗಿಡ ನೆಡುವಿಕೆಯ ಹಲವು ಕಾರ್ಯಕ್ರಮಗಳನ್ನು ವಿಶ್ವವಿದ್ಯಾಲಯ ಹಾಗೂ ನಿರ್ದೇಶನಾಲಯಗಳ ಮೂಲಕ ಹಮ್ಮಿಕೊಳ್ಳಲಾಗಿದೆ.








## ಪ್ರೌಢ ಶಾಲೆಗಳ ವಿದ್ಯಾರ್ಥಿಗಳಿಗೆ ಎನ್.ಎಸ್.ಎಸ್. ವಿಸ್ತರಣೆ

2018-19ನೇ ಸಾಲಿನಲ್ಲಿ ಪ್ರಾರಂಭಗೊಂಡ ಕರ್ನಾಟಕ ರಾಜ್ಯ ಸರ್ಕಾರದ ಅನುದಾನದಲ್ಲಿ ದೇಶದಲ್ಲೇ ಅಪೂರ್ವ ಎನ್ನುವಂತೆ ರಾಷ್ಟ್ರೀಯ ಸೇವಾ ಯೋಜನೆಯನ್ನು ಪ್ರೌಢ ಶಾಲೆಗಳಲ್ಲಿ ವಿಸ್ತರಿಸುವ ಹೆಮ್ಮೆಯ ಯೋಜನೆಯಾಗಿದೆ. ಈ ಸಂಬಂಧ ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನ ಮತ್ತು ಸೇವಾ ಮನೋಭಾವ ಮೂಡಿಸಲೆಂದು ಕಾಲೇಜುಗಳಲ್ಲಿ ಆರಂಭವಾಗಿದ್ದ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಗಳನ್ನು ಸರಳೀಕರಿಸಿ, ಪ್ರೌಢಶಾಲೆಗಳಿಗೂ ಸರ್ಕಾರ ವಿಸ್ತರಿಸಿದೆ.

ದೇಶದಲ್ಲೆ ಮೊದಲ ಬಾರಿ ಪ್ರೌಢ ಶಾಲೆಗಳ 8 ಮತ್ತು 9ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ರಾಷ್ಟ್ರೀಯ ಸೇವಾ ಯೋಜನೆಯನ್ನು ರಾಜ್ಯದ 34 ಶೈಕ್ಷಣಿಕ ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆಯಲ್ಲಿ 10

ಶಾಲೆಗಳಲ್ಲಿ ಆರಂಭದಲ್ಲಿ ಪ್ರಯೋಗಾತ್ಮಕವಾಗಿ ಎನ್.ಎಸ್.ಎಸ್ ನ್ನು ಅನುಷ್ಠಾನ ಗೊಳಸಬಹುದಾಗಿದ್ದು, ಅನುಷ್ಠಾನದ ಜವಾಬ್ದಾರಿಯನ್ನು ರಾಜ್ಯ ಎನ್.ಎಸ್.ಎಸ್ ಅಧಿಕಾರಿಗಳ ನೇತೃತ್ವದ ಸಮಿತಿಯು ನೋಡಿಕೊಳ್ಳುವುದಾದರೂ ಪ್ರೌಢ ಮತ್ತು ಪ್ರಾಥಮಿಕ ಶಿಕ್ಷಣ ಇಲಾಖೆಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳ ಮೂಲಕ ಇದನ್ನು ಅನುಷ್ಠಾಗೊಳಸಬಹುದಾಗಿದ್ದು, ಈ ವಿಸ್ತರಣೆಯನ್ನು ಪ್ರತಿ ಜಿಲ್ಲೆಗೆ 20 ಶಾಲೆಗಳಂತೆ ಒಟ್ಟು 680 ಶಾಲೆಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯನ್ನು ಅನುಷ್ಠಾನಗೊಳಿಸಿ ಹಂತ ಹಂತವಾಗಿ ವಿದ್ಯಾರ್ಥಿಗಳನ್ನು ನೋಂದಾಯಿಸಲಾಗುತ್ತಿದೆ. ರಾಷ್ಟ್ರೀಯ ಸೇವಾ ಯೋಜನೆಯ ಅನುಷ್ಠಾನಕ್ಕಾಗಿ ಶಾಲೆಗೊಬ್ಬರು ಕಾರ್ಯಕ್ರಮಾಧಿಕಾರಿಯನ್ನು ನಿಯೋಜಿಸಿ, ಸದರಿ ಕಾರ್ಯಕ್ರಮಾಧಿಕಾರಿಗಳಿಗೆ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ನಡೆಸಲಾಗಿದೆ. ಸರಳ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತಹ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಸಲಾಗಿದೆ.

ರಾಷ್ಟ್ರೀಯ ಸೇವಾ ಯೋಜನೆಯಿಂದ ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸೇವಾ ಮನೋಭಾವ, ಶಿಸ್ತು, ಸಂಯಮ, ಉತ್ತಮ ನಾಯಕತ್ವ, ವೃತ್ತಿ ಗೌರವ, ಸಹಬಾಳ್ವೆ, ಭಾವೈಕ್ಯತೆ ಹಾಗೂ ಜವಾಬ್ದಾರಿಯಂತಹ ಉತ್ತಮ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಸಹಕಾರಿಯಾಗಿದೆ. ಸದರಿ ಕಾರ್ಯಕ್ರಮಗಳನ್ನು ಸಾಮಾನ್ಯ ಶಿಕ್ಷಣದೊಂದಿಗೆ ಎಳವೆಯಿಂದಲೆ ಮಕ್ಕಳ ವ್ಯಕ್ತಿತ್ವ ವಿಕಸಗೊಳಸುವ ಸದುದ್ದೇಶದಿಂದ ಹಾಗೂ ಹಲವಾರು ಜ್ಞಾನ, ಕೌಶಲ್ಯ, ಆರೋಗ್ಯ ಮತ್ತು ನೈತಿಕ ಮೌಲ್ಯಗಳ ಬಗ್ಗೆ ಅರಿವು ಮೂಡಿಸುವುದರ ಮೂಲಕ ಅವರಲ್ಲಿ ರಾಷ್ಟ್ರಕಟ್ಟುವ ಕಾರ್ಯಗಳನ್ನು / ಭಾವನೆಗಳನ್ನು ಬಿತ್ತಿ ಸತ್ಪ್ರಜೆಗಳನ್ನಾಗಿ ರೂಪಿಸುವ ಹಿನ್ನಲೆಯಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಸುತ್ತಿದೆ. ಒಂದೇ ವಾಕ್ಯದಲ್ಲಿ ಹೇಳುವುದಾದರೆ, "ಶಿಕ್ಷಣದ ಮೂಲಕ ಸೇವೆ ಮತ್ತು ಸೇವೆಯ ಮೂಲಕ ಶಿಕ್ಷಣ" ಎಂಬ ಮನೋಭಾವನೆಯನ್ನು ಬೆಳೆಸುವುದು, ರಾಷ್ಟ್ರೀಯ ಸೇವಾ ಯೋಜನೆಯ ಮೂಲ ತತ್ವವಾಗಿದೆ.

ಪ್ರಸ್ತುತ 2022-23ನೇ ಸಾಲಿನ ಕರ್ನಾಟಕ ರಾಜ್ಯದಿಂದ ಸರ್ಕಾರಿ ಪ್ರೌಢಶಾಲೆಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಅನುಷ್ಠಾನಕ್ಕಾಗಿ ರೂ.80.00 ಲಕ್ಷಗಳನ್ನು ಅನುದಾನವಾಗಿ ಬಿಡುಗಡೆ ಮಾಡಲಾಗಿದೆ. ರಾಜ್ಯದ ವಸತಿ ಪ್ರೌಢಶಾಲೆಗಳಿಗೆ ಎನ್.ಎಸ್.ಎಸ್. ಸ್ವ-ಆರ್ಥಿಕ ಯೋಜನೆಯಡಿಯಲ್ಲಿ, ಪ್ರೌಢಶಾಲೆಗಳಿಗೆ ಎನ್.ಎಸ್.ಎಸ್. ಅಳವಡಿಸಿದ ಮಾದರಿಯಲ್ಲೇ ಅಳವಡಿಸಲಾಗಿದೆ.

ಸರ್ಕಾರಿ ಪ್ರೌಢಶಾಲೆಯಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಅನುಷ್ಠಾನಕ್ಕಾಗಿ ಬಿಡುಗಡೆಯಾದ ಅನುದಾನದಲ್ಲಿ ಅನೇಕ ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಅದರಲ್ಲಿ ಕೆಲವೊಂದು ಪ್ರಮುಖ ಕಾರ್ಯಕ್ರಮಗಳ ವಿವರ ಈ ಕೆಳಕಂಡಂತೆ ನೀಡಲಾಗಿದೆ.

1. ರಾಷ್ಟ್ರೀಯ ಸೇವಾ ಯೋಜನೆ ಘಟಕದ ನೇತೃತ್ವದಲ್ಲಿ ಉಚಿತ ಕಾನೂನು ನೆರವು ಶಿಬಿರವನ್ನು ಏರ್ಪಡಿಸಲಾಗಿದೆ.

2. ಗ್ರಾಮ ಪಂಚಾಯತ್ ವತಿಯಿಂದ ಕ್ರೀಡಾಂಗಣ ಸ್ವಚ್ಛತೆ ಕಾರ್ಯಕ್ರಮ: ವಿದ್ಯಾರ್ಥಿಗಳಿಗೆ ಕಲಿಕಾ ಪೂರಕವಾದ ವಾತಾವರಣ ನಿರ್ಮಾಣಗೊಳಸುವುದು

3. ಹಾವೇರಿಯಲ್ಲಿ " ಮಕ್ಕಳ ಹಕ್ಕುಗಳ ಜಾಗೃತಿ" ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಿರುವುದು.

4. ಒಂದು ದಿನದ ವಿಶೇಷ ಶಿಬಿರದ ಕಾರ್ಯಕ್ರಮ ಅಂಗವಾಗಿ ಬೆಳಗಾವಿ ಹಿಂಡಲಗಾ ಕೇಂದ್ರ ಕಾರಾಗೃಹವನ್ನು ವೀಕ್ಷಣೆ.

5. ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಅಭಿಯಾನವನ್ನು ಆಯೋಜಿಸಿರುವುದು.

6. ಮತದಾನ ಜಾಗೃತಿ ಅಂಗವಾಗಿ ಜನಜಾಗೃತಿ ಜಾಥ ಕಾರ್ಯಕ್ರಮ ಮತ್ತು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಆಯೋಜಿಸಿರುವುದು.

7. ರಾಷ್ಟ್ರೀಯ ಸೇವಾ ಯೋಜನಾ ಘಟಕ ಮತ್ತು ಪೋಲಿಸ್ ಇಲಾಖೆಯ ವತಿಯಿಂದ ವಿದ್ಯಾರ್ಥಿಗಳಿಗೆ ಅಪರಾಧ ಮಾಹಿತಿ ಶಿಬಿರ ಕಾರ್ಯಕ್ರಮ: ಸದರಿ ಕಾರ್ಯಕ್ರಮದಲ್ಲಿ ಪೋಲಿಸ್ ಅಧಿಕಾರಿಗಳಾದ ನವೀನ ಕುಮಾರ ಮತ್ತು ರಾಜೇಶ ಅತ್ಯುತ್ತಮ ಮಾಹಿತಿ ನೀಡಿರುವುದು.

8. ಬೃಹತ್ ಉಚಿತ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರವನ್ನು ಏರ್ಪಡಿಸಿರುವುದು. 9. ಮಕ್ಕಳ ಹಕ್ಕುಗಳ ದಿನಾಚರಣೆಯ ಅಂಗವಾಗಿ ಜಾಗೃತಿ ಜಾಥಾಗಳನ್ನು ನಡೆಸಿರುವುದು. 10. ನ್ಯೂನತಾ ಮಕ್ಕಳ ಪ್ರಗತಿಗಾಗಿ ಸಮಗ್ರ ಶಿಕ್ಷಣವೇ ಉತ್ತರ ಎಂಬ ಕಾರ್ಯಕ್ರಮವನ್ನು ಏರ್ಪಡಿಸಲಾಗಿರುತ್ತದೆ. (World Disabled Day) ಹೀಗೆ ಹಲವಾರು ಕಾರ್ಯಕ್ರಮಗಳ ಮುಖಾಂತರ ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಗುತ್ತಿದೆ.

9. ಮಕ್ಕಳ ಹಕ್ಕುಗಳ ದಿನಾಚರಣೆಯ ಅಂಗವಾಗಿ ಜಾಗೃತಿ ಜಾಥಾಗಳನ್ನು ನಡೆಸಿರುವುದು.
10. ನ್ಯೂನತಾ ಮಕ್ಕಳ ಪ್ರಗತಿಗಾಗಿ ಸಮಗ್ರ ಶಿಕ್ಷಣವೇ ಉತ್ತರ ಎಂಬ ಕಾರ್ಯಕ್ರಮವನ್ನು ಏರ್ಪಡಿಸಲಾಗಿರುತ್ತದೆ. (World Disabled Day) ಹೀಗೆ ಹಲವಾರು ಕಾರ್ಯಕ್ರಮಗಳ ಮುಖಾಂತರ ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಗುತ್ತಿದೆ.

## ಉಚಿತ ಕಾನೂನು ನೆರವು ಶಿಬಿರ





## ಸ್ವಚ್ಛತೆ ಕಾರ್ಯಕ್ರಮ





## ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ



## " ಮಕ್ಕಳಹಕ್ಕುಗಳಜಾಗೃತಿ" ಕಾರ್ಯಕ್ರಮ





### ಗ್ರೀನ್ ಅಭಿಯಾನದಡಿ ಹಸಿರು ದೀಪಾವಳಿ ಆಚರಣೆ

ಮಕ್ಕಳಿಗೆ ಗೂಗಲ್ ಮೀಟ್: ಮಾಲಿನ್ಯಮುಕ್ತ ಹಬ್ಬಗಳ ಆಚರಣೆ ಕುರಿತು ಜಾಗೃತಿ

## ಒಂದು ದಿನದ ವಿಶೇಷ ಕಾರ್ಯಕ್ರಮ: “ಕೇಂದ್ರ ಕಾರಾಗೃಹ ವೀಕ್ಷಣೆ”

## ಮತದಾನ ಜಾಗೃತಿ ಕಾರ್ಯಕ್ರಮ

ರಾಜ್ಯ ಚುನಾವಣಾ ಆಯೋಗ, ರಾಜ್ಯ ಎನ್. ಎಸ್. ಎಸ್. ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮತ್ತು ವಿವಿಧ ಜಿಲ್ಲಾಡಳಿತಗಳ ಆಹ್ವಾನದ ಮೇರೆಗೆ ವಿಶ್ವವಿದ್ಯಾಲಯಗಳು ಮತ್ತು ನಿರ್ದೇಶನಾಲಯಗಳ ರಾಷ್ಟ್ರೀಯ ಸೇವಾ ಯೋಜನಾ ಕೋಶವು ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಶಾಲಾ ಕಾಲೇಜುಗಳ ನೆರವಿನಿಂದ ಮತದಾನ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಬೀದಿ ನಾಟಕ, ಜಾಥಾ, ಮನೆ ಮನೆ ಭೇಟಿಗಳ ಮೂಲಕ ಸ್ವಯಂ ಸೇವಕರು ಜನರಲ್ಲಿ ಮತದಾನದ ಬಗ್ಗೆ ಅರಿವು ಮೂಡಿಸಿದರು. ಅಲ್ಲದೆ ಚುನಾವಣಾ ಕರ್ತವ್ಯದಲ್ಲಿ ಹಲವು ಜಿಲ್ಲೆಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರು ಮತದಾನಕೇಂದ್ರಗಳಲ್ಲಿ  ಸೇವೆ ಸಲ್ಲಿಸಿದ್ದಾರೆ. ಇದು







# ಮಾದಕ ವ್ಯಸನ ವಿರುದ್ಧ ಅರಿವು ಮೂಡಿಸುವ ಕಾರ್ಯಕ್ರಮ

ದಿನಾಂಕ: 26.06.2022ರಂದು ಅಬಕಾರಿ ಇಲಾಖೆಯ ಸಹಯೋಗದೊಂದಿಗೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ "ವಿಶ್ವ ಮಾದಕ ವಸ್ತು ವಿರೋಧಿ ದಿನ"ದ ಪ್ರಯುಕ್ತ ಜಾಥವನ್ನು ಏರ್ಪಡಿಸಲಾಯಿತು. ಈ ಜಾಥಾ ದಲ್ಲಿ 15000 ಸ್ವಯಂ ಸೇವಕರು ಭಾಗವಹಿಸಿ, ಇದು "ಗ್ಲೋಬಲ್ ವರ್ಲ್ಡ್ ರೆಕಾರ್ಡ್" ಗೌರವಕ್ಕೆ ಪಾತ್ರವಾಯಿತು.




www.globalworldrecord.org

CERTIFICATE NO: GWR283WSSW209

GWR
GLOBAL WORLD RECORD

CERTIFICATE

This certificate is awarded to

NATIONAL SERVICE SCHEME YOUTH EMPOWERMENT & SPORTS DEPARTMENT GOVERNMENT OF KARNATAKA

The New World Record 15000 People participated in walk. In this record 15000 people Uniquely walk 3 Km Distance. The event was held at Sree Kanteerava Stadium, Sampangi Rama Nagara, Bengaluru Karnataka on 26th June 2022. The purpose of the record "Walk Against Drug Abuse". In this event 15000 people successfully participated and "Walk Against Drug Abuse" for 3 km. This even was enrolled as New World Record in GWR GLOBAL WORLD RECORD. This world record has organised by "Karnataka State Excise Department and National Service Scheme Youth Empowerment And Sports Department Government of Karnataka". We heartfully wish all the best for their motive to reach and save our generation.

CHAIRMAN
GWR GLOBAL WORLD RECORD

DIRECTOR
WSS SPORTS & ENTERTAINMENT PVT LTD

CERTIFIED APPROVED

# ಕ್ಯಾನ್ಸರ್ ಔಟ್ರೀಚ್ ಕಾರ್ಯಕ್ರಮ

ಕಾನ್ಸರ್ ರೋಗದ ಬಗ್ಗೆ ಅರಿವು ಮತ್ತು ತಪಾಸಣೆ ಶಿಬಿರ/ಕಾರ್ಯಕ್ರಮಗಳನ್ನು ವಿವಿಧ ವಿಶ್ವವಿದ್ಯಾಲಯಗಳ ಸಹಯೋಗದೊಂದಿಗೆ ಆಯೋಜಿಸಿದ್ದು, ಇದರಿಂದ 28,626+ ಕ್ಕೂ ಹೆಚ್ಚು ಫಲಾನುಭವಿಗಳಾಗಿದ್ದಾರೆ.





## ಬುಡಕಟ್ಟು ಪ್ರದೇಶಗಳಲ್ಲಿ ಕ್ಯಾನ್ಸರ್ ಆರೋಗ್ಯ ತಪಾಸಣಾ ಶಿಬಿರಗಳು

ಯೆನೆಪೋಯ ವಿಶ್ವವಿದ್ಯಾಲಯ, ಮಂಗಳೂರು ಸಹಯೋಗದೊಂದಿಗೆ ಕ್ಯಾನ್ಸರ್ ಔಟ್ರೀಚ್ ಕಾರ್ಯಕ್ರಮದಡಿಯಲ್ಲಿ ದಕ್ಷಿಣ ಕನ್ನಡ, ಉಡುಪಿ ಮತ್ತು ಕೊಡಗು ಜಿಲ್ಲೆಗಳ ಬುಡಕಟ್ಟು ಪ್ರದೇಶಗಳಲ್ಲಿ 56+ ಶಿಬಿರಗಳನ್ನು ಆಯೋಜಿಸಿದ್ದು, ಈ ಯೋಜನೆಯಿಂದ ಸುಮಾರು 4974 ಕ್ಕೂ ಹೆಚ್ಚು ಫಲಾನುಭವಿಗಳಾಗಿದ್ದಾರೆ.






## ಕೃಷಿ ಅರಿವು ಕಾರ್ಯಕ್ರಮಗಳು:

ಕೃಷಿ ವಿಶ್ವವಿದ್ಯಾಲಯಗಳು, ರೈತಾಪಿ ಜನಗಳಿಗೆ ವ್ಯವಸಾಯದಲ್ಲಿ ಇತ್ತೀಚಿನ ತಾಂತ್ರಿಕ ಸೌಲಭ್ಯಗಳ ಬಗ್ಗೆ ಉತ್ಪಾದನೆ ಮತ್ತು ಆರ್ಥಿಕ ಆದಾಯ ಹೆಚ್ಚಿಸಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ, ಮಣ್ಣಿನ ಪರೀಕ್ಷೆಯ ಮಹತ್ವ, ಸಾವಯವ ಗೊಬ್ಬರಗಳ ಬಳಕೆ ಬಗ್ಗೆ ಅರಿವು ಇನ್ನು ಹಲವಾರು ವ್ಯವಸಾಯಕ್ಕೆ ಸಂಬಂಧಿಸಿದಂತೆ ವಿಚಾರಗಳ ಕುರಿತು ಅರಿವು ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ.

## ಪ್ರಕೃತಿ ವಿಕೋಪ ಕಾರ್ಯಕ್ರಮಗಳು:

ಪ್ರಕೃತಿ ವಿಕೋಪ ಸಂದರ್ಭಗಳಲ್ಲಿ ಹಲವಾರು ಗ್ರಾಮಗಳು ಮಳೆಯ ನೀರಿನಿಂದ ಸುತ್ತುವರೆದಿದ್ದು, ಗ್ರಾಮೀಣ ಜನರಿಗೆ ಗಂಜಿ ಮತ್ತು ಇತರೆ ಆಹಾರ ಪೊಟ್ಟಣ/ ಆಹಾರ ಸಾಮಾಗ್ರಿಗಳನ್ನು ಸ್ಥಳೀಯ ಆಡಳಿತ ಮಂಡಳಿಗಳ ಸಹಯೋಗದೊಂದಿಗೆ ವಿತರಿಸಲಾಯಿತು.



## ಪೋಸ್ಕೋ, ಪೋಷಣ್ ಅಭಿಯಾನ ಮತ್ತು ಡಿಜಿಟಲ್ ಬ್ಯಾಂಕಿಂಗ್:

ವಿವಿಧ ವಿಶ್ವವಿದ್ಯಾಲಯ ಮಟ್ಟದಲ್ಲಿ ಜನ ಸಾಮಾನ್ಯರಿಗೆ ನಗದು ರಹಿತ ವಹಿವಾಟು ಉತ್ತೇಜಿಸುವ ಸಲುವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಡಿಜಿಟಲ್ ಬ್ಯಾಂಕಿಂಗ್ ಹಾಗೂ ಪೋಸ್ಕೋ ಮತ್ತು ಪೋಷಣ್ ಅಭಿಯಾನಗಳ ಬಗ್ಗೆ ಹಲವಾರು ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.






## ರಕ್ತದಾನ ಶಿಬಿರ








## ವಿಶ್ವ ಪರಿಸರ ದಿನ

ವಿಶ್ವಪರಿಸರ ದಿನದ ಅಂಗವಾಗಿ ದಿನಾಂಕ: 05.06.2022ರಂದು ಕರ್ನಾಟಕ ಸರ್ಕಾರದ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ರವರು ರಾಜಭವನದಲ್ಲಿ ರುದ್ರಾಕ್ಷಿ ಸಸಿಯನ್ನು ನೆಡುವ ಮೂಲಕ ಚಾಲನೆ ನೀಡಿದರು. "ONLY ONE EARTH" ಶೀರ್ಷಿಕೆಯಡಿ 2 ದಿನದ ರಾಷ್ಟ ಮಟ್ಟದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಯಿತು.






## ರಾಷ್ಟ್ರೀಯ ಸೇವಾ ಯೋಜನೆಯನ್ನು ಜಾಲತಾಣದಲ್ಲಿ ಅಳವಡಿಸಿರುವ ಕುರಿತು

ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯ ಚಟುವಟಿಕೆಗಳ ಕುರಿತು ರಾಜ್ಯ ಮತ್ತು ರಾಷ್ಟ್ರದ ಎಲ್ಲಾ ಯುವ ಜನತೆಯು ವೀಕ್ಷಿಸಿ ತಮ್ಮ ಜೀವನದಲ್ಲಿ ಅಳವಡಿಸಲು ಅನುಕೂಲವಾಗಿಸಲು ಮತ್ತು ರಾಷ್ಟ್ರೀಯ ಸೇವಾ ಯೋಜನೆಯ ಬಗ್ಗೆ ಅಗತ್ಯ ಮಾಹಿತಿಯನ್ನು ಎಲ್ಲಾ ಜನ ಸಾಮಾನ್ಯರಿಗೆ ಸುಲಭವಾಗಿ ಒದಗುವಂತೆ ಮಾಡಲು ಪ್ರಚಲಿತದಲ್ಲಿರುವ ಸಾಮಾಜಿಕ ಜಾಲತಾಣಗಳಾದ ಇನ್ಸ್ಟಾಗ್ರಾಮ್, ಫೇಸ್ಬುಕ್ ಪೇಜ್, ಯೂಟ್ಯೂಬ್ ಚಾನಲ್, ಟ್ವಿಟ್ಟರ್ ಖಾತೆಗಳನ್ನು ಸೃಜಿಸಲಾಗಿದೆ. ಅಲ್ಲದೆ ರಾಷ್ಟ್ರೀಯ ಸೇವಾ ಯೋಜನಾ ಕೋಶದ ವೆಬ್ಸೈಟ್ ಮತ್ತು ಸ್ವಯಂ ಸೇವಕರ ನೋಂದಣಿಗಾಗಿ ಡೇಟಾಬೇಸ್ ವೆಬ್ ಸೈಟ್ ಆರಂಭಿಸಲಾಗಿದೆ. ಇದರಿಂದಲೂ ಎಲ್ಲಾ ನಾಗರೀಕರು ವೀಕ್ಷಿಸಬಹುದಾಗಿದೆ.

ರಾಷ್ಟ್ರೀಯ ಸೇವಾ ಯೋಜನೆಯ ಸಾಮಾಜಿಕ ಜಾಲತಾಣದ ಲಿಂಕ್ಸ್ ವಿವರಗಳು:

Instagram: @nss_karnataka_gok
Facebook Page: NSSGOK1/
Youtube Channel: @nsskarnataka7988
Twitter: @karnatakanss

Website: https://nss.karnataka.gov.in/







## ಕೋವಿಡ್-19ಗೆ ಸಂಬಂಧಿಸಿದ ಕಾರ್ಯಕ್ರಮಗಳು

ವಿಶ್ವವಿದ್ಯಾಲಯಗಳ ಸಹಕಾರದೊಂದಿಗೆ ಕೋವಿಡ್-19 ಅರಿವು, ಒತ್ತಡ ನಿರ್ವಹಣೆ ಇತ್ಯಾದಿ ವಿಚಾರಗಳ ಕುರಿತಾಗಿ ಹೆಚ್ಚು ONLINE ಕಾರ್ಯಕ್ರಮಗಳನ್ನು ನಡೆಸಲಾಗಿದೆ ಹಾಗೂ ವಿವಿಧ ವಿಶ್ವವಿದ್ಯಾಲಯದ ಮಟ್ಟದಲ್ಲಿ ಕೋವಿಡ್-19 ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.






# ಮಾಧ್ಯಮ ಲೇಖನಗಳು



## ಉತ್ತಮ ವ್ಯಕ್ತಿತ್ವಕ್ಕೆ ಎನ್ನೆಸ್ಸೆಸ್ ಪಾತ್ರ ಹಿರಿದು

ಎನ್ನೆಸ್ಸೆಸ್ ರಾಜ್ಯ ಪ್ರಶಸ್ತಿ ಪ್ರದಾನ ಮಾಡಿದ ರಾಜ್ಯಪಾಲ ಗೆಹ್ಲೋಟ್

ವಿಶೇಷ ಶಿಬಿರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಶಂಕರೇಗೌಡ ಅಭಿಮತ

## ಗ್ರಾಮಾಭಿವೃದ್ಧಿಯಿಂದ ದೇಶ ಅಭಿವೃದ್ಧಿ

ಪ್ರಜಾವಾಣಿ

## ಭಯೋತ್ಪಾದನಾ ವಿರೋಧಿ ದಿನ ಆಚರಣೆ

## ಮರಿಯಾನಗರದಲ್ಲಿ ರಕ್ತದಾನ ಶಿಬಿರ

## ಹಿಂದುಳಿದ ಹಳ್ಳಿಗೆ ಎನ್‌ಎಸ್‌ಎಸ್ ಬಲ

ಅಮೃತ ಸಮುದಾಯ ಯೋಜನೆಯಡಿ ರಾಜ್ಯದ 750 ಗ್ರಾಮ ಆಯ್ಕೆ

ಪ್ರಜಾವಾಣಿ

## 'ಪ್ಲಾಸ್ಟಿಕ್ ಉತ್ಪಾದನೆ, ಬಳಕೆ ಸಲ್ಲ'


ಆಂದೋಲನ

## ಎನ್ ಎಸ್ ಎಸ್ ವಿದ್ಯಾರ್ಥಿಗಳಿಂದ ಶಾಲೆಗೆ ಸುಣ್ಣ ಬಣ್ಣ



Edition
Nov 10, 2022 Page No. 1
Powered by : eReleGo.com

## ಯುವಕರಿಂದ ಹೆಚ್ಚೆಚ್ಚು ಮಾದಕ ಬಳಕೆ ಕಳವಳಕಾರಿ



## ರಾಜ್ಯದ 7 ಕಡೆ ಸೈಕಲ್ ಜಾಥಾ

ಸ್ವಾತಂತ್ರ್ಯ ಅಮೃತ ಮಹೋತ್ಸವದ ನಿಮಿತ್ತ ಸೈಕಲ್ ಜಾಥಾ ಆಯೋಜನೆ



NP NEWS | ನಿರಂಜನಪ್ರಭೆ

## ರಾಷ್ಟ್ರೀಯ ಸೇವಾ-ಐಕ್ಯತಾಭಾವ ಮೂಡಿಸಿ



https://niranjanaprabha.com

DECCAN HERALD 28.04.2023

## 'Yen Run 2023' marathon

## ರಾಷ್ಟ್ರೀಯ ಸೇವಾ ಯೋಜನೆಯಿಂದ ಬದುಕಿನ ವಿಕಾಸ



## ಆಯುರ್ವೇದ ಕ್ರಾಂತಿ ಸೃಷ್ಟಿಸಿದೆ: ಡಾ.ಆಳ್ವ



## ವಾರ್ಷಿಕ ವಿಶೇಷ ಶಿಬಿರದಲ್ಲಿ ಗಾದೆಹೇಳಿ ಒಗಟು ಬಿಡಿಸಿ ಸ್ಪರ್ಧೆ ಯಶಸ್ವಿ





